ಬರುವುದಿಲ್ಲವೆ, ಅವರ ಅಕ್ಕಪಕ್ಕದಲ್ಲಿ ಅಥವಾ ಕುಟುಂಬದಲ್ಲೇ ವಧೂ ದಹನದಂಥ ಪ್ರಸಂಗಗಳು ಆಗಿರಬಹುದಲ್ಲವೆ? ಎಂಬ ಪ್ರತಿ ಪ್ರಶ್ನೆಗಳೂ ಬಂದವು. ಇರಬಹುದು, ಆದರೆ ಬದುಕಿನ ಕುರಿತ, ಭವಿಷ್ಯದ ಕುರಿತ ಕಲ್ಪನೆಯನ್ನೇ ವಿಕೃತಗೊಳಿಸಬಹುದಾದ ಇಂಥ ಸಂಗತಿಗಳನ್ನು ಈ ರೀತಿಯಲ್ಲಿ ಅಧಿಕೃತಗೊಳಿಸಿದಂತಾಗುವುದಿಲ್ಲವೆ ಎಂದೂ ಒಂದಿಷ್ಟು ದಿನ ಚರ್ಚೆ ನಡೆಯಿತು.

ಹೀಗೆ ಛದ್ಮವೇಷಗಾರಿಕೆ ಆಗಾಗ ಆಯಾ ಕಾಲದ ಸಾಮಾಜಿಕ ಕಲ್ಪನಾಶೀಲತೆಯನ್ನು ಪ್ರತಿಫಲಿಸುತ್ತ ಬಂದಿದೆ. ಕೇವಲ ವೇಷಭೂಷಣಗಳ ವಿಶೇಷತೆಗೆಂದೇ ಇರುವ ಕೊಡಗಿನ ಮಹಿಳೆ ಅಥವಾ ಗುಜರಾಥಿ ಮಹಿಳೆ ಅಥವಾ ನರ್ಸು – ಇಂಥವು ನಿರುಪದ್ರವಿಯಾದ ಛದ್ಮವೇಷಗಳಾಗಿದ್ದರೆ, ಕೆಲವೊಮ್ಮೆ ಅತ್ಯಂತ ಅಸೂಕ್ಷ್ಮವಾದ ಅಪಾಯಕಾರಿಯಾದ 'ಭಿಕ್ಷುಕ', 'ಹುಚ್ಚ', 'ಮೂಗ', 'ಅಂಧ' – ಹೀಗೆಲ್ಲ ಶೀರ್ಷಿಕೆ ಹೊಂದಿದ ಬೇಜವಾಬ್ದಾರಿ ಛದ್ಮವೇಷಗಳೂ ಅಣಕಗಳೂ ರಂಗಕ್ಕೆ ಬರುತ್ತವೆ. ಕೆಲವರು ಊರಲ್ಲೇ ಇರುವ ಅಂಥ ನಿಜವಾದ ಅಸಹಾಯಕ ಭಿನ್ನರನ್ನು ನೋಡಿ ಸ್ಫೂರ್ತಿ ಪಡೆದರೆ ಕೆಲವರು ತಮ್ಮ ಭಯಂಕರ ಕಲ್ಪನಾಶೀಲತೆಯನ್ನು ಅದರಲ್ಲಿ ಹಾಕುವುದುಂಟು. ಈ ಕೃತ್ಯ ಆ ಬಗೆಯ ಅಸಂಖ್ಯ ಭಿನ್ನರಿಗೆ ಯಾವ ರೀತಿಯ ಕಿಂಚಿತ್ ನೆರವನ್ನೂ ನೀಡದೆ, ಅವರ ಕುರಿತ ಕಾಳಜಿಯನ್ನೂ ಅರಿವನ್ನೂ ಎಚ್ಚರಿಸದೆ,



> ಯಕ್ಷಗಾನದಿಂದ ಹಿಡಿದು ಎಲ್ಲ ನಾಟಕ ರೂಪಗಳಲ್ಲೂ ಮಂಡಿತ ಕಥಾನಕದ alter–ego ಅಥವಾ ಪರ್ಯಾಯ ಸಾಕ್ಷಿ ಪ್ರಜ್ಞೆಯಂತೆ ಕೋಡಂಗಿ ಬರುತ್ತಾನೆ. ಉತ್ತರದ ಹಂಗಿಲ್ಲದ ಪ್ರಶ್ನೆಗಳನ್ನು ಕೇಳುವುದೇ ಅವನ ಕೆಲಸ.